ಶ್ರೀ ಕೆ. ಎಂ. ನಾಗಣ್ಣ.—ರೇಸ್ ಕೋರ್ಸ್‌ನಿಂದ 20—25 ಲಕ್ಷ ರೂಪಾಯಿ ತೆಗೆದುಕೊಂಡಿದ್ದೇವೆಂದು ಹೇಳಿದಿರಿ. ಅವರಿಂದ ನಿಮಗೆ ಏನಾದರೂ ಬರಬೇಕಾಗಿತ್ತೇ ? ಇಲ್ಲ ಅಡ್ವಾನ್ಸ್ ಆಗಿ ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಬೆಟ್ಟಿಂಗ್ ಟ್ಯಾಕ್ಸ್‌ನಿಂದ ನಮಗೆ ಹಣ ಬರಬೇಕಾಗಿತ್ತು. ಅದನ್ನು ಅವರು ಸ್ವಲ್ಪ ಅಡ್ವಾನ್ಸ್ ಆಗಿ ಕೊಟ್ಟರೆ ಏನೂ ತಪ್ಪಿಲ್ಲ.

## Filling up of Vacancies in K.E.B. Shimoga Circle

182. **Sri S. M. SHEERANALY CHANDRASEKHAR** (Hosanagar).—

Will the Minister for Public Works and Electricity be pleased to state:—

(*a*) the number of candidates interviewed during 1972 and 1973 by the Superintending Engineer, Electrical, K.E.B. West Circle, Shimoga Town ;

(*b*) the number of vacancies existed in the Karnataka Electricity Board, West Circle, Shimoga Town ;

(*c*) the number of candidates called for interview ;

(*d*) the number of candidates interviewed and appointed against existing vacancies ;

(*e*) the cirteria adopted for selection of candidates ?

**Sri H. M. CHANNABASAPPA.** (Minister for Public works and Electricity).—

| | 1972 | | | 1973 | | | | |
|---|---|---|---|---|---|---|---|---|
| | I Grade Clerks | II Grade Clerks/ Mater Readers | Typists/Clerks | Asst. Store keepers | Store Keepers | II Class Mechanics | Drivers | Attenders |
| (*a*) | 1,800 | 10,801 | 892 | 460 | 151 | 60 | 102 | 196 |
| | | 58 | 5 | 3 | 1 | 20 | 10 | 4 |
| (*c*) | 1,800 | 10,801 | 893 | 460 | 151 | 60 | 102 | 194 |
| (*d*) | 33 | 141 | 8 | 6 | 2 | 20 | 19 | 11 |

(*e*) According to the performance of the candidates in the interview.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—58 ಸ್ಥಾನಗಳಿಗಾಗಿ 10,801 ಅಭ್ಯರ್ಥಿಗಳನ್ನು ಕರೆಯಲ್ಪಟ್ಟಿದೆ ಎಂದು ಹೇಳಿದ್ದೀರಿ, ಇಷ್ಟೊಂದು ಡಿಸ್ಪ್ಯಾರಿಟಿ ಇರುವುದು ಸೂಕ್ತವೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಧಾನ ಸೂಕ್ತವಲ್ಲ, ಈ ವಿಧಾನವನ್ನು ಬದಲಾಯಿಸಬೇಕೆಂದು ಅಜ್ಜೆ ಮಾಡಿದ್ದೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಆಯ್ಕೆ ವಿಧಾನವೂ ಕೂಡ ಸರಿಯಾಗಿಲ್ಲವೆಂದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. 50 ಸ್ಥಾನ ಖಾಲಿ ಇದ್ದರೆ- ಅದರ 2 ರಷ್ಟು 3ರಷ್ಟು ಜನರ ಪಟ್ಟಿಯನ್ನು ತಯಾರು ಮಾಡುತ್ತಾರೆ. ಮತ್ತೆ ಕೆಲವು ಸ್ಥಾನಗಳು ಖಾಲಿಯಾದರೆ ಪ್ರಯಾರಿಟಿ ಲೀಸ್ಟ್‌ನಲ್ಲಿರತಕ್ಕಂಥವರಿಗೆ ಕೆಲಸ ಕೊಡುತ್ತಾರೆ. ಬಾಕಿ ಉಳಿದವರನ್ನು ಒಂದು ವರ್ಷದಲ್ಲಿ ಭರ್ತಿ ಮಾಡುವುದಕ್ಕೆ ಆಗದಿದ್ದರೆ ಲ್ಯಾಪ್ಸ್ ಆಯಿತೆಂದು ಹೇಳಿ ಪುನಃ ಮುಂದಿನ ವರ್ಷಕ್ಕೆ ಬೇರೆ ಇಂಟರ್‌ವ್ಯೂ ಕರೆಯುತ್ತಾರೆ, ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದಕ್ಕೆ ಒಂದು ವಿಧಾನ ಇದೆ. ಒಂದು ಸಾರಿ ಕಾರ್ ಫಾರ್ ಮಾಡಿದಾಗ ಎಷ್ಟು ಸ್ಥಾನಗಳ ಹುದ್ದೆಯು ಖಾಲಿ ಇರುತ್ತವೆಯೋ ಅಷ್ಟನ್ನು ಭರ್ತಿ ಮಾಡಿಕೊಳ್ಳುತ್ತಾರೆ. ಆ ಮೇಲೆ ವೇಟಿಂಗ್ ಲೀಸ್ಟ್‌ನಲ್ಲಿರುವವರಿಗೆ 12 ತಿಂಗಳು 18 ತಿಂಗಳು ಎಂದು ಕಾಲವನ್ನು ನಿಗದಿ ಮಾಡಿಕೊಂಡಿರುತ್ತಾರೆ. ಅಷ್ಟರೊಳಗೆ ಬೆಕೆನ್ಸಿ ಖಾಲಿಯಾಗಿ ಭರ್ತಿ ಆಗದಿದ್ದರೆ ಅದು ರ್ಯಾಪ್ಸ್ ಆಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ 50 ಸ್ಥಾನಗಳಿಗಾಗಿ ಹೆಚ್ಚು ಕಡಿಮೆ 5 ರಿಂದ 10 ಸಾವಿರದವರೆಗೆ ಅಭ್ಯರ್ಥಿಗಳನ್ನು ಇಂಟರ್‌ವ್ಯೂಗೆ ಕರೆದರು. ಆಗ ರಾಜ್ಯದ ಮೂಲೆ ಮೂಲೆಯಿಂದಲು ಅಭ್ಯರ್ಥಿಗಳು ಬಂದಿದ್ದರು. ಇದರಿಂದ ಅಭ್ಯರ್ಥಿಗಳಿಗೆ ಅಗಿರ ತಕ್ಕಂಥ ಅನ್ಯಾಯ ಎಷ್ಟು ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಈಗಾಗಲೇ ಇದಕ್ಕೆ ಉತ್ತರ ಹೇಳಿದೆ. ನಮಗೆ ಎಷ್ಟು ಸಂಖ್ಯೆಯ ಹುದ್ದೆ ಖಾಲಿ ಇರುತ್ತದೆಯೋ ಅಷ್ಟಕ್ಕೆ ಇಂಟರ್‌ವ್ಯೂ ಕಾಲಫಾರ್ ಮಾಡಬೇಕೆಂದು ಅಜ್ಜೆ ಮಾಡಿದ್ದೇವೆಂದು ಹೇಳಿ ಈಗಾಗಲೇ ಹೇಳಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—50 ಸಂಖ್ಯೆಯ ಹುದ್ದೆಗೆ 500 ಜನರ ಪಟ್ಟಿಯೊಂದನು. ತಯಾರು ಮಾಡುತ್ತಾರೆ. ಆಮೇಲೆ ವಸೂಲಿ ಬಾಜಿ ಆದಮೇಲೆ ಒಬೊಬ್ಬರನ್ನೇ ಅವಾಯಿಂಟ್‌ಮೆಂಟ್ ಮಾಡುತ್ತಾ ಹೋಗುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿ ವಸೂಲಿ ಬಾಜಿ ಪ್ರಶ್ನೆಯಿಲ್ಲ. ನಮಗೆ 10 ಜನರ ಬೆಕೆನ್ಸಿ ಇದ್ದರೆ, ಇನ್ನು ಒಂದು ವರ್ಷದೊಳಗೆ 20—25 ಬೆಕೆನ್ಸಿ ಆಗಬಹುದೆಂದು ಅಂದಾಜು ಮಾಡಿ ಅದರ ದ್ವಿಗುಣ, ತ್ರಿಗುಣಕ್ಕೆ ನಿಗದಿ ಮಾಡಿ ಕಾಲ್‌ಫಾರ್ ಮಾಡುತ್ತಾರೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಇಲ್ಲಿ ಆಯ್ಕೆ ಮಾಡಿರುವವರ ಪೈಕಿ ಹರಿಜನ ಮತ್ತು ಗಿರಿಜನರಿಗೆ ಎಷ್ಟೆಷ್ಟು ಪರ್ಸೆಂಟ್ ಕೊಡಲಾಗಿದೆ ಎಂಬ ಬಗ್ಗೆ ವಿವರಗಳನ್ನು ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಷೆಡ್ಯೂಲ್ಡ್ ಕ್ಯಾಸ್ಟ್ ಬಗ್ಗೆ ಹೇಳಬೇಕೆಂದರೆ, ಫಸ್ಟ್ ಗ್ರೇಡ್ ಕ್ಲಾರ್ಕ್‌ಷಿಪ್‌ಗೆ 12.1 ಪರ್ಸೆಂಟ್, ಸೆಕೆಂಟ್ ಗ್ರೇಡ್ ಕ್ಲಾರ್ಕ್‌ಷಿಪ್‌ಗೆ 17.75 ಪರ್ಸೆಂಟ್, ಜೈಪಿಸ್ಟ್ ಕಮ್ ಕ್ಲಾರ್ಕ್‌ಷಿಪ್‌ಗೆ 25 ಪರ್ಸೆಂಟ್. ಅಸಿಸ್ಟೆಂಟ್ ಸ್ಕೋರರ್ ಕೀಪರ್ಸ್ 16.6 ಪರ್ಸೆಂಟ್, ಕೊಡಲಾಗಿದೆ. ಆದರೆ ಸ್ಕೋರರ್ ಕೀಪರ್ಸ್ ಪೈಕಿ ಕೊಟ್ಟಿಲ್ಲ ; ಮುಂದೆ ಸೆಕೆಂಡ್ ಕ್ಲಾಸ್ ಮೆಕ್ಯಾನಿಕ್ಸ್‌ಪೈಕಿ 10 ಪರ್ಸೆಂಟ್, ಡ್ರೈವರ್ಸ್ ಪೈಕಿ 15.8 ಪರ್ಸೆಂಟ್, ಅಟೆಂಡರ್ಸ್ ಪೈಕಿ 27.3 ಪರ್ಸೆಂಟ್ ಕೊಡಲಾಗಿದೆ.

9-00 A.M.

ಶ್ರೀ ಕೋಣಂದೂರು ಲಿಂಗಪ್ಪ.—ಈ ಹರಿಜನ ಮತ್ತು ಗಿರಿಜನರನ್ನು ಬಿಟ್ಟು ಉಳಿದಂತೆ ಭರ್ತಿ ಮಾಡಿರುವ ಅಭ್ಯರ್ಥಿಗಳ ಪೈಕಿ ಒಂದೇ ಕೋಮಿಗೆ ಸೇರಿದವರನ್ನು ಶೇಕಡ 90 ರಷ್ಟು ಆಯ್ಕೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಆ ಬಗ್ಗೆ ವಿವರಗಳು ಇದ್ದರೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹರಿಜನ ಮತ್ತು ಗಿರಿಜನರ ಲೆಕ್ಕವನ್ನು ಮಾತ್ರ ಇಡರಾಗಿದೆ. ಬಾಕಿ ಜಾತಿಯವರ ಲೆಕ್ಕವನ್ನು ನಾವು ಇಟ್ಟಿಲ್ಲ.

Sri H. D. DEVE GOWDA.—The Hon. Member is making a charge that the Officer-in-charge has made selection of candidates belonging to his own community. You cannot straightaway deny it.

Sri H. M. CHANNABASAPPA.—It is not one officer that has made that selection.

Sri H. D. DEVE GOWDA.—There are 3 Officers.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿರತಕ್ಕಂಥ ಸೂಪರಿಂಟೆಂಡಿಂಗ್ ಇಂಜಿನಿಯರ್ ಯಾರು ಎಂಬುದು ತಮಗೆ ಗೊತ್ತಿದೆ. ಬೇಕಾದರೆ ಅವರ ಹೆಸರು ಹೇಳಬಹುದು ಎಂದು ಹೇಳಿದರೆ ಹೇಳುತ್ತೇನೆ, ಏಕೆಂದರೆ ತಾವು ಯಾವಾಗಲೂ ವಿಧಿನಿಯಮಗಳನ್ನು ಅನುಸರಿಸಬೇಕು ಎಂದು ಹೇಳುತ್ತೀರಿ.

ಶ್ರೀ ಎಚ್..ಎಂ. ಚನ್ನಬಸಪ್ಪ.—ತಾವು ಧಾರಾಳವಾಗಿ ಹೇಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಿದ್ದರೆ ಆಮೇಲೆ ತಮ್ಮ ಹತ್ತಿರ ಬಂದು ಹೇಳುತ್ತೇನೆ.

ಶ್ರೀ ಎಚ್, ಡಿ. ದೇವೇಗೌಡ.—ಶೇಕಡ 90ರಷ್ಟು ಹುದ್ದೆಗಳನ್ನು ಒಂದೇ ಕೋಮಿಗೆ ಕೊಟ್ಟಿದ್ದಾರೆಂದು ಅವರು ಹೇಳುತ್ತಿದ್ದಾರೆ. ಅದನ್ನು ತಾವು ವಿಚಾರ ಮಾಡಿನಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ವಿಚಾರ ಮಾಡಿ ಹೇಳುತ್ತೇನೆ. ಈಗ ಆ ಬಗ್ಗೆ ನನ್ನ ಹತ್ತಿರ ಸಮಾಚಾರ ಇಲ್ಲ.

Sri T. R. SHAMANNA.—Is it not a fact that thousands of candidates have been interviewed and some have been appointed. Is it not a fact that most of the appointments have given to the relatives, kith and kin.

Sri H. M. CHANNABASAPPA.—I will have to verify what the hon. Member has stated.

SriD. DEVARAJ URS.–If the Hon. Member knows any specific information with regard to the kind of selection that has been alleged to have been made and the officer concerned has favoured his own or one community candidates or has shown some favouritism or nepotism-whatever information they have, I would like to get it. The Govern, ment will take note of it and then see that proper and suitable action is taken.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಇಂಟರ್‌ವ್ಯೂನಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಹೆಸರನ್ನು ಒಂದು ಪಟ್ಟಿ ಮಾಡುತ್ತಾರೆ. ಅದರಂತೆ ಅಭ್ಯರ್ಥಿಗಳು ತಮ್ಮ ಹೆಸರು ಪಟ್ಟಿಯಲ್ಲಿದೆ, ಕೆಲಸ ಸಿಗುತ್ತದೆ ಎಂದು ಕಾಯ್ದುಕೊಂಡಿರುತ್ತಾರೆ. ಆದರೆ 5—6 ವರ್ಷಗಳಾದರೂ ಕೆಲಸದ ಆರ್ಡರನ್ನು ಕಳಿಸುವುದಿಲ್ಲ ಇದರಿಂದ...

ಶ್ರೀ ಎಚ್. ಎಂ. ಚನ್ನಬಸಪ್ಪ.—5—6 ವರ್ಷಗಳಾಗುವುದಿಲ್ಲ. 18 ತಿಂಗಳುಗಳ ಕಳಿಸಿ ಕೊಡರಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—18 ತಿಂಗಳುಗಳೊಳಗೆ ಕಳಿಸುತ್ತಿಲ್ಲ; ತಮಗೆ ಜಾಗ್ರತೆ ಕಳಿಸಿದ್ದರೆ ವಯಸ್ಸು ಮೀರಿ ಹೋಗುತ್ತದೆ ಎಂದು ಫೋನ್ ಮಾಡಿದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಾರೆ. ಇದರಿಂದ ಅಂತಹ ಅಭ್ಯರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ ?

Sri H. M. CHANNABASAPPA.—The Hon. Member's presuiption is not correct. The list of 25 c ndidates will be published. As and when the vacancies arise, they go on appointing those candidates. if the people in the list do not get jobs, nobody can help it.

ಶ್ರೀ ಕೆ. ಎನ್. ವೀರಪ್ಪಗೌಡ.—ನನಗೆ ತಿಳಿದಿರುವಂತೆ ಈ ಬೋರ್ಡಿನಲ್ಲಿ ಅಧಿಕಾರದಲ್ಲಿರುವವರು ತಮಗೆ ಬೇಕಾದವರನ್ನು ಹಂಗಾಮಿಯಾಗಿ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ನಂತರ ಕೆಲಸ ಖಾಲಿ ಇದೆ ಎಂದು ಜಾಹೀರಾತು ಮಾಡಿ, ಹೊರಗಡೆಯಿಂದ ಅಭ್ಯರ್ಥಿಗಳನ್ನು ಕರೆಸಿ ಷೋ ಗೋಸ್ಕರ ಇಂಟರ್‌ವ್ಯೂ ಮಾಡುತ್ತಾರೆ. ಆ ರೀತಿ ಇಂಟರ್‌ವ್ಯೂ ಮಾಡಿದ ಮೇಲೆ, ಮೊದಲು ಹಂಗಾಮಿಯಾಗಿ ಯಾರುಯಾರನ್ನು ಕೆಲಸಕ್ಕೆ ತೆಗೆದುಕೊಂಡಿರುತ್ತಾರೋ, ಅವರುಗಳನ್ನೇ ಖಾಯಂ ಮಾಡುತ್ತಾರೆ. ಈ ರೀತಿ ಅಧಿಕಾರದಲ್ಲಿರುವವರು ತಮ್ಮತಮ್ಮ ಸಂಬಂಧೀಕರಿಗೇ ಕೆಲಸಗಳನ್ನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಈ ರೀತಿ ಕೆಲಸಗಳನ್ನು ತಮ್ಮ ಸಂಬಂಧೀಕರಿಗೆ ಹಂಚಿರುವ ಬಗ್ಗೆ ಪತ್ತೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗಲೇ ದೇವೇಗೌಡರ ಪ್ರಶ್ನೆಗೆ ಮತ್ತು ರುದ್ರಪ್ಪನವರ ಪ್ರಶ್ನೆಗೆ ಇದನ್ನು ವಿಚಾರ ಮಾಡಿ ತಿಳಿಸುತ್ತೇನೆ ಎಂದು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ಈಗ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಏನು ನಂದರ್ಶನ ಮಾಡಿ ಪಟ್ಟಿಯನ್ನು ತಯಾರು ಮಾಡುತ್ತಾರೆ, ಆ ಪಟ್ಟಿಯ ಪ್ರಕಾರ ಸಂಪೂರ್ಣವಾಗಿ ಸೆಲೆಕ್ಟ್ ಆಗಿರತಕ್ಕ ಅಭ್ಯರ್ಥಿಗಳಿಗೆ ಅಪಾಯಿಂಟ್‌ಮೆಂಟ್ ಕೊಡುತ್ತೀವೆ ಎಂದು ತಿಳಿಸುವುದಕ್ಕೆ ಒಂದು ವರ್ಷ, ಒಂದೂವರೆ ವರ್ಷ ಕಾಲ ಇರುತ್ತದೆಂದು ಕೇಳಿದ್ದೇನೆ. ಆದರೆ ಅನೇಕ ಸಾರಿ ಲಿಸ್ಟ್ ಮಾಡಿದ್ದರೂ ಕಾಲ ಮುಗಿದು ಹೋದ ಮೇಲೆ ಆದು ಲ್ಯಾಪ್ಸ್ ಆಗುತ್ತದೆ. ಈ ಒಂದೂವರೆ ವರ್ಷದ ಕಾಲ ಏನಿದೆ ಅದು ಮುಗಿದು ಹೋದ ಮೇಲೆ ಮತ್ತೆ ಅಭ್ಯರ್ಥಿಗಳನ್ನು ಕಾಲ್‌ಫರ್ ಮಾಡುತ್ತಾರೆ. ಆಗ 10—15 ಸಾವಿರ ಕ್ಯಾಂಡಿಡೇಟ್ಸ್ ಅರ್ಜಿ ಹಾಕುತ್ತಾರೆ, ಮತ್ತೆ ಇಂಟರ್‌ವ್ಯೂ ಮಾಡುವುದು ಹೀಗಾಗುತ್ತದೆ. ಆದುದರಿಂದ ಇದನ್ನು ತಪ್ಪಿಸುವುದಕ್ಕಾಗಿ ಕಾಲ ಮುಗಿದರೂ ಕೂಡ ಇನ್ನೂ ಕಾಲವನ್ನು ವಿಸ್ತರಣೆ ಮಾಡಿ ಆ ಪಟ್ಟಿಯಲ್ಲಿರತಕ್ಕ ಅಭ್ಯರ್ಥಿಗಳನ್ನು ತೆಗೆದು ಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಪದ್ಧತಿ ಸರಿಯಾಗಿಲ್ಲ; ಅದುದರಿಂದ ಬೇರೆ ಪದ್ಧತಿಯನ್ನು ಅನುಸರಿಸಬೇಕೆಂದು ಆಜ್ಞೆ ಕೊಟ್ಟಿದ್ದೇವೆ. ಪುನ: ಇದನ್ನು ವಿಚಾರ ಮಾಡಿ ಯಾವರೀತಿ ಮಾಡಿದರೆ ಉತ್ತಮವಾಗುತ್ತದೆ ಎನ್ನುವುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈಗ ಆಗಿರುವುದನ್ನು ಏನು ಮಾಡುತ್ತೀರಿ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈಗ ಆಗಿರುವುದನ್ನು ಏನೂ ಮಾಡುವುದಕ್ಕಾಗುವುದಿಲ್ಲ.

## CONSTRUCTION OF 80 K.M. ROAD IN EACH TALUK

225. Sri S. M. SHEERANALY CHANDRASEKHAR (Hosanagara).—

Will the Minister for Public Works and Electricity be pleased to state:—

(*a*) whether the Government is aware of the scheme according to which the Public Works Department had taken up construction of roads measuring 80 K.M. in each Taluk during the year 1973-74;

(*b*) whether Government is aware that the Public Works Department has completed the road works in some taluks but many roads are yet to be taken up for construction in other taluks;